# ಹೊಸತು

## ಕಾಯ ಸ್ಕಿನ್ ಕೇರ್ ಉತ್ಪನ್ನ

ತ್ವಚೆಯ ಸಂರಕ್ಷಣೆಗೆ ವಿವಿಧ ಉತ್ಪನ್ನಗಳನ್ನು ಪರಿಚಯಿಸಿರುವ ಕಾಯ ಸ್ಕಿನ್ ಕ್ಲಿನಿಕ್ ಇದೀಗ ಬೇಸಿಗೆಯಲ್ಲಿ ತ್ವಚೆಯ ರಕ್ಷಣೆಗಾಗಿ ಹೊಸ ಉತ್ಪನ್ನವೊಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರಲ್ಲಿ ಕಾಯ ಸ್ಕಿನ್ ಬಾರ್ ಸೇರಿದಂತೆ ಒಟ್ಟು 18 ಬಗೆಯ ಉತ್ಪನ್ನಗಳಿವೆ. ಇವು ಬೇಸಿಗೆಯಲ್ಲಿ ತ್ವಚೆ ಕಳೆಗುಂದುವುದನ್ನು ತಡೆಯುತ್ತದೆ. ಎನ್ನುತ್ತದೆ ಕಂಪೆನಿ.

ವಿವರಕ್ಕೆ: 997206655




## ಹಿಮಾಲಯದಿಂದ ಹೈ ಓವ್ನಾ




ಹಿಮಾಲಯ ಕಂಪೆನಿ ಹೈ ಓವ್ನಾ ಎಂಬ ಹರ್ಬಲ್ ಪಾನೀಯ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ಪೋಷಕಾಂಶಗಳಿಂದ ಕೂಡಿದ್ದು ಆರೋಗ್ಯಕ್ಕೆ ಉತ್ತಮ ಎಂದು ಕಂಪೆನಿ ಹೇಳಿದೆ. ಕಾಳುಮೆಣಸು ಮುಂತಾದ ಉತ್ಪನ್ನಗಳಿಂದ ಸಮೃದ್ಧವಾಗಿದ್ದು, ರೋಗನಿರೋಧಕ ಶಕ್ತಿಯನ್ನು ಹೊಂದಿದೆ. ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

ಚಾಕೊಲೇಟ್ ಮತ್ತು ವೆನಿಲಾ ಸ್ವಾದಗಳಲ್ಲಿ ಲಭ್ಯ. ಬೆಲೆ ₹ 190. ಎಲ್ಲ ಹಿಮಾಲಯ ಮಳಿಗೆಗಳಲ್ಲಿ ಸಿಗುತ್ತದೆ. ವಿವರಕ್ಕೆ: 1800-425-1930

## ಹೊಸ ಡಿಸ್ನಿ ಸ್ಕಾರ್ಫ್

ಮಕ್ಕಳ ಉಡುಪು, ಕಾಸ್ಮೆಟಿಕ್ಸ್ ಮುಂತಾದ ಫ್ಯಾಷನೆಬಲ್ ಉತ್ಪನ್ನಗಳಿಗೆ ಹೆಸರಾದ ಡಿಸ್ನಿ ಕಂಪೆನಿ ಇದೀಗ ಹೊಸ ಮಾದರಿಯ, ವಿವಿಧ ಡಿಸೈನ್‌ನ, ಅತ್ಯಾಕರ್ಷಕ ವರ್ಣ ಸಂಯೋಜನೆಯಿಂದ ಕೂಡಿದ ಸ್ಕಾರ್ಫ್‌ಗಳನ್ನು ಬಿಡುಗಡೆ ಮಾಡಿದೆ. ಎಲ್ಲ ಡಿಸ್ನಿ ಉತ್ಪನ್ನ ಸಿಗುವ ಮಳಿಗೆಗಳಲ್ಲಿ ಲಭ್ಯ. ಬೆಲೆ ₹ 595ರಿಂದ ₹1395.

ವಿವರಕ್ಕೆ: 080 40972260



## ಜೈಕೋಮ್‌ನಿಂದ ಅಲಾರಾಂ ಸಿ.ಸಿ.ಟಿವಿ




ಜೈಕೋಮ್ ಎಲೆಕ್ಟ್ರಾನಿಕ್ ಸೆಕ್ಯುರಿಟಿ ಸಿಸ್ಟಮ್ಸ್ ಲಿಮಿಟೆಡ್ ಕಂಪೆನಿ 'ಇನ್ ಟಚ್' ಹೆಸರಿನ ಸಿ.ಸಿ.ಟೀವಿ ಪುಷ್ ವೀಡಿಯೊ ಅಲರಾಂ ಸಿಸ್ಟಮ್ ಎಂಬ ಉತ್ಪನ್ನವನ್ನು ಬಿಡುಗಡೆ ಮಾಡಿದೆ. ಅಂಗಡಿ ಮಳಿಗೆಗಳು, ಡಿಸೈನರ್ ಬೋಟಿಕ್ಸ್,ಆಭರಣ ಮಳಿಗೆ, ವಾಚು, ಮೊಬೈಲ್ ಮಳಿಗೆ ಮುಂತಾದ ಕಡೆಗಳಿಗೆ ಸೂಕ್ತವಾದದ್ದು. ಇದು ಕಳ್ಳತನದಂತಹ ವಿಪತ್ತಿನ ಸಂದರ್ಭದಲ್ಲಿ ಅಲರಾಂ ಹೊಡೆದು ಎಚ್ಚರಿಸುವುದಲ್ಲದೆ ಅದನ್ನು ವೀಡಿಯೊ ಚಿತ್ರೀಕರಣ ಕೂಡ ಮಾಡುತ್ತದೆ. ಇದರಲ್ಲಿರುವ ಸೆನ್ಸಾರ್ ಬಟನ್ ವ್ಯಕ್ತಿಯ ಚಲನೆಯನ್ನು ತಕ್ಷಣ ತಿಳಿಸುತ್ತದೆ. ಮನೆಯಲ್ಲಿ ಕೂಡ ಇದನ್ನು ಬಳಸಬಹುದು. ಇದರಿಂದ ಮಕ್ಕಳು, ಮಹಿಳೆಯರು ಮತ್ತು ವೃದ್ಧರು ನಿರ್ಭಯವಾಗಿರಬಹುದು ಎನ್ನುತ್ತದೆ ಕಂಪೆನಿ.

ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗಾಗಿ 9820066305/ 9821867826 ಸಂಪರ್ಕಿಸಿ.